# ದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆ

**ಡಾ. ಮಣೂರ ಸುಧಾರಾಣಿ ಶಿವಪ್ಪಾ**
ಅತಿಥಿ ಉಪನ್ಯಾಸಕಿ
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
manursudharani96@gmail.com

ನಮ್ಮ ನಾಡು ಆದಿಕಾಲದಿಂದಲೂ ಋಷಿ– ಮುನಿಗಳ, ಸಾಧು– ಸಂತರ ನೆಲೆ ಬೀಡು. ದಾಸರು, ಸಂತರು, ಶರಣರು ಮತ್ತು ಕವಿಗಳು ಈ ನಾಡಿನ ಆಧ್ಯಾತ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಮೌಲ್ಯಗಳ ಉನ್ನತಿಗೆ ನೀಡಿದ ಕೊಡುಗೆ ಅಪಾರವಾದದ್ದು. 12ನೇ ಶತಮಾನದಲ್ಲಿ ಸಮಾಜದಲ್ಲಿರುವ ವರ್ಣ, ವರ್ಗ, ಲಿಂಗ ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆ, ಕಂದಾಚಾರ ಅಳಿಸಿ ಸಮಾನತೆಯ ನವಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿದವರು ಶರಣರು. ಅವರು ಕಟ್ಟಿದ ಕಲ್ಯಾಣ, ಸಮಾಜ ಕಲ್ಯಾಣ ಕ್ರಾಂತಿಯ ನಂತರ ನಾಶ ಹೊಂದಿತು. ಮತ್ತೇ ಅದೇ ರೀತಿಯ ಕನಸುಗಳನ್ನು ಹೊತ್ತು ಅದೇ ರೀತಿಯ ಧೋರಣೆ, ಸಾಮಾಜಿಕ ಚಿಂತನೆ, ವೈಚಾರಿಕ ದೃಷ್ಟಿಕೋನದ ಮೂಲಕ ಸಮಾಜವನ್ನು ಕಟ್ಟ ಬಯಸಿದವರು ದಾಸರು.

ಕರ್ನಾಟಕದಲ್ಲಿ ಕೆಳವರ್ಗಗಳ ಅಭಿವೃದ್ಧಿಗೆ ಶ್ರಮಿಸಿದ ಮೊದಲ ಸಾಂಸ್ಕೃತಿಕ ನಾಯಕರು ಶರಣರಾದರೆ, ಅವರ ನಂತರ ಬಂದ ಸಾಂಸ್ಕೃತಿಕ ನಾಯಕರು ದಾಸರು. ದಾಸರು 15–16ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿಕಾರರು. ದಾಸರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನುಪಮವಾದದ್ದು. ಇವರು ಕೀರ್ತನೆಗಳೊಂದಿಗೆ ಕೃತಿಗಳನ್ನು ರಚಿಸಿದರು. (ಉದಾ: ಕನಕದಾಸರು– ಮೋಹನ ತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧಾನ್ಯಚರಿತ್ರೆ ಮುಂ. ಕೃತಿಗಳನ್ನು ರಚಿಸಿದ್ದಾರೆ) ದಾಸರ ಕೀರ್ತನೆಗಳು ಭಾವಪೂರ್ಣವಾಗಿವೆ. ಇವರು ಈ ಕೀರ್ತನೆಗಳ ಮೂಲಕ ಭಗವಂತನಲ್ಲಿ ಭಕ್ತಿಯನ್ನು ಸಾರುವುದರ ಜೊತೆಗೆ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಕೆಲವು ಅಸಾಂಪ್ರದಾಯಿಕ ಆಚರಣೆಗಳನ್ನು ಒರೆಗಲ್ಲಿಗೆ ಹಚ್ಚಿ ಪ್ರಶ್ನಿಸಿದ್ದಾರೆ. ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರಿಗೂ ಮಾನಸಿಕ ನೆಮ್ಮದಿಯು ಅವಶ್ಯಕ ಎಂದು ಹೇಳಿದ್ದಾರೆ.

ಧರ್ಮವಿಲ್ಲದ ಅರಸು ಮುರಿದಕಾಲಿನ ಹೊರಸು

ನಿರ್ಮಲವಿಲ್ಲದ ಮನಸು ಅದು ಕಜ್ಜಿ ತಿನಿಸು

ಸತ್ಯಧರ್ಮಗಳೆಲ್ಲ ಎತ್ತ ಪೋದವೊ ಕಾಣೆ

ಉತ್ತಮರ ಜೀವನಕೆ ದಾರಿಯಿಲ್ಲ

ನಿತ್ಯದಲಿ ಕಳವು ವ್ಯಭಿಚಾರವುಳ್ಳವರೆಲ್ಲ

ಅರ್ಥ ಸಂಪದರಾಗಿ ಅನುಭವಿಸುತಿಹರು – ಕನಕದಾಸರು

ದಾಸರು ಸಮಾಜದ ಒಳತಿಗಾಗಿ ಧರ್ಮಾಚರಣೆಯ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಸಮಾಜದಲ್ಲಿ ಸತ್ಯ, ಧರ್ಮಗಳು ಮಾಯವಾಗುತ್ತಿರುವುದನ್ನು ನೋಡಿ ಮರುಗಿದ್ದಾರೆ.

ದಾಸರ ಕೀರ್ತನೆಗಳಲ್ಲಿ ಸಮಾನತೆಯ ಸಮಾಜ ನಿರ್ಮಾಣದ ಧೋರಣೆ, ಸಾಮಾಜಿಕ ಕಳಕಳಿ, ಲೋಕವಿಮರ್ಶೆ, ಸಂಪ್ರದಾಯ ವಿರೋಧಿ ಧೋರಣೆ, ಸಾಮಾಜಿಕ ಚಿಂತನೆ ಮತ್ತು ವೈಚಾರಿಕ ಮನೋಭಾವಗಳು ಕಂಡುಬರುತ್ತವೆ. ದಾಸರು ತಮ್ಮ ಕೀರ್ತನೆಗಳಲ್ಲಿ ಜನರ ನಡುವಳಿಕೆ, ಸಮಾಜದಲ್ಲಿ ಬೇರುಬಿಟ್ಟ ರೂಢಿಗತ ಸಂಪ್ರದಾಯಗಳು, ಜಾತಿಮತ ವ್ಯವಸ್ಥೆಗಳು, ಬಡವಬಲ್ಲಿದ, ಮೇಲು ಕೀಳೆಂಬ ತಾರತಮ್ಯಗಳು, ಹಳಸಲ ಮೌಲ್ಯಗಳು, ಬದುಕಿನ ಆಡಂಬರ ಮೊದಲಾದ ವಿಚಾರಗಳನ್ನು ತಮ್ಮ ಕೀರ್ತನೆಗಳಲ್ಲಿ ವಿಡಂಬಿಸುತ್ತಾರೆ. ತಮ್ಮ ವಿಚಾರ ಸ್ವಾತಂತ್ರ್ಯ, ಉತ್ತಮ ವಿವೇಕ, ಪರಿಪಕ್ವ ಪ್ರಪಂಚಾನುಭವ, ಜನಭಾಷೆಯ ಅರಿವಿನಿಂದ ಸಮಾಜಕ್ಕೆ ಅವಶ್ಯಕವಾದ ನೀತಿ, ತತ್ವಗಳನ್ನು ಬೋಧಿಸುತ್ತಾರೆ. ಸಾಮಾಜಿಕ ಕಳಕಳಿ, ಲೋಕದೃಷ್ಟಿ, ಹರಿತವಾದ ಮಾತುಗಳಿಂದ ಸಮಾಜದ ಕುಂದುಕೊರತೆಗಳನ್ನು ಮುಚ್ಚುಮರೆಯಿಲ್ಲದೆ ಖಂಡಿಸುತ್ತಾರೆ.

ದಾಸರ ಬಹುರೂಪಿ ವ್ಯಕ್ತಿತ್ವದ ದರ್ಶನ ಆಗುವುದು ಅವರ ಕೀರ್ತನೆಗಳಲ್ಲಿ. ಅವರ ಕಾಲದಲ್ಲಿ ಸಮಾಜವನ್ನು ಕಾಡುತ್ತಿದ್ದ ಬಹುಮುಖ್ಯ ಸಮಸ್ಯೆ ಎಂದರೆ ಜಾತಿ ವ್ಯವಸ್ಥೆ. ಸಮಾಜದಲ್ಲಿ ವ್ಯಕ್ತಿಯ ಪಾಂಡಿತ್ಯ, ಪ್ರತಿಭೆ, ವಿದ್ವತ್ತು, ಜ್ಞಾನ, ಮಾನವೀಯತೆಗಿಂತ ವ್ಯಕ್ತಿಯ ಜಾತಿಗೆ ಹೆಚ್ಚು ಬೆಲೆ ಕೊಡಲಾಗುತ್ತಿತ್ತು. ಕುಲ ಮುಖ್ಯವಲ್ಲ ಗುಣಮುಖ್ಯ. ಒಳ್ಳೆಯ ಗುಣಗಳಿದ್ದರೆ ದೇವರು ಸಹ ಅಂಥವರನ್ನು ಮೆಚ್ಚುತ್ತಾನೆ ಎಂಬುದು ಸ್ವ ಅನುಭವದ ಮೂಲಕ ಪ್ರಪಂಚಕ್ಕೆ ತೋರಿಸಿಕೊಟ್ಟವರು ದಾಸರು.

ಉದಾ : ಕುಲಕುಲಕುಲವೆಂದು ಹೊಡೆದಾಡದಿರಿ

ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?

ಕುಲಕುಲಕುಲವೆನ್ನುತಿಹರೋ! ಕುಲವಾವುದು ಸತ್ಯ

ಸುಜನರಿಗೆ – ಕನಕದಾಸರು

ದಾಸರ ಈ ಕೀರ್ತನೆ ನಮ್ಮ ಸಾಮಾಜಿಕ ವ್ಯವಸ್ಥೆಯ ಚಿತ್ರಣವನ್ನೇ ತೆರದಿಡುತ್ತದೆ. ಇಲ್ಲಿ ಅವರು **'ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ?'** ಎಂಬ ಪ್ರಸ್ನೆಯ ಮೂಲಕ ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು ಕಿತ್ತೊಗೆಯಲು ಪ್ರಯತ್ನ ಪಡುತ್ತಾರೆ. ದಾಸರು ಮೌಢ್ಯ ಹಾಗೂ ಗೊಡ್ಡು ಸಂಪ್ರದಾಯಗಳ ಸಮಾಜದಲ್ಲಿಯೇ

ಬೆಳೆದರು ಕೂಡ ವೈಚಾರಿಕ ದೃಷ್ಟಿಕೋನದೊಂದಿಗೆ ಬದುಕಿದವರು. ಮನುಷ್ಯನ ಸಂಕುಚಿತ ಮನೋವೃತ್ತಿಯನ್ನು ದಾಸರು ಖಂಡಿಸುತ್ತಾರೆ. ಜಾತಿ ವ್ಯವಸ್ಥೆ ಕೇವಲ ದಾಸರ ವಯಕ್ತಿಕ ಪ್ರಶ್ನೆಯಲ್ಲ. ಅಲಕ್ಷಕ್ಕೊಳಗಾದ ಸಮೂಹದ ಪ್ರಶ್ನೆ. ದಾಸರು, ಪರಂಪರಾಗತವಾಗಿ ಬಂದ ಅಸಮಾನತೆ, ಅಹಂಕಾರ, ಡಾಂಭಿಕತನಗಳಿಗೆ ಪ್ರತಿರೋಧ ಒಡ್ಡುತ್ತಾರೆ. ಕೆಳ ಸಮುದಾಯದವರ ಅಸಹಾಯಕತೆಗೆ ದನಿಯಾಗಿ ನಿಲ್ಲುತ್ತಾರೆ. ಶೋಷಣೆ ಮಾಡಿಸಿಕೊಳ್ಳುವುದೆ ತಮ್ಮ ಬದುಕು ಎಂದು ನಂಬಿದವರ ಬದುಕು ಬದಲಾಯಿಸಲು ಹೋರಾಡುತ್ತಾರೆ.

ದಾಸರು ಸಮಾಜದ ಕುಟಿಲ ವ್ಯಕ್ತಿಗಳನ್ನು ನೇರವಾಗಿ ಕೇಳುತ್ತಾ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ತಿಳಿಸಿ ಅವರಿಗೆ ನೀತಿ ಬೋಧನೆ ಮಾಡುತ್ತಾರೆ.

ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ

ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ

ದೇವರ ತೀರ್ಥ ಶ್ರೇಷ್ಠವಾದದ್ದು. ಆದರೆ ಸತ್ಯವಂತರ ಸಂಗ ಅದಕ್ಕಿಂತ ಶ್ರೇಷ್ಠ. ಪರೋಪಕಾರಕ್ಕೆ ಆಗದ ಧನ, ದಾನ ಧರ್ಮ ಮಾಡದ ಸ್ವಾರ್ಥಿ, ಲೋಭಿ ಸಿರಿವಂತ, ಡಂಭಾಚಾರಿ, ಮಾನಹೀನನಾಗಿ ಬದುಕುವ ವ್ಯಕ್ತಿ, ಗುರು ಹಿರಿಯರನ್ನು ಗೌರವಿಸದ ಮಕ್ಕಳು, ಪ್ರೀತಿಯಿಂದ ಎಡೆಯಿಕ್ಕದ, ಸನ್ನೆಯನ್ನರಿತು ನಡೆಯದ ಗೃಹಿಣಿ, ಮೆಚ್ಚಿದ ಹೆಣ್ಣನ್ನು ಪ್ರೀತಿಯಿಂದ ಕಾಣದ ಪುರುಷ, ಸಮರ್ಥವಾಗಿ ಆಳದ ದೊರೆ, ನೀತಿಯಿಂದ ಬಾಳದ ಸೇವಕ, ಸತ್ಯವನ್ನು ನಿರ್ವಹಿಸದ ಕುಟಿಲ ಇದ್ದು ಫಲವಿಲ್ಲ ಎಂದು ಹೇಳುವ ಮೂಲಕ ಕುಟಿಲ ವ್ಯಕ್ತಿಗಳು ಆತ್ಮವಿಮರ್ಶೆ ಮಾಡಿಕೊಳ್ಳುವ ಹಾಗೆ ಮಾಡುತ್ತಾರೆ.

ದಾಸರ ಈ ಕೀರ್ತನೆ ಇಂದಿಗೂ ಪ್ರಸ್ತುತ. ಸರಿಯಾಗಿ ರಾಜ್ಯಭಾರ ಮಾಡಿ ಪ್ರಜೆಗಳ ಸೌಖ್ಯ ಬಯಸದ ಪ್ರಧಾನಿ, ಮುಖ್ಯಮಂತ್ರಿ, ರಾಷ್ಟ್ರಕಾಯದ ಸೈನಿಕರು, ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಮಕ್ಕಳು ಇದ್ದು ಇಲ್ಲದ ಹಾಗೆ.

ದಾಸರು ಸಾಧು, ಸನ್ಯಾಸಿ, ಜಂಗಮ, ವೇಷಗಳ ಮೂಲಕ ಜಗತ್ತಿನಲ್ಲಿ ನಡೆಯುವ ಕಪಟ, ವಂಚನೆ, ದುರ್ವ್ಯವಹಾರ, ದುಷ್ಕೃತ್ಯ, ಡಂಭಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ.

ಜಪವ ಮಾಡಿದರೇನು ತಪವ ಮಾಡಿದರೇನು

ಕಪಟಗುಣ ವಿಪರೀತ ಕಲುಷವಿದ್ದವರು

ನೇಮವಿಲ್ಲದ ಹೇಮವೇತಕಯ್ಯಾ

ತೀರ್ಥವ ಪಡೆದವರೆಲ್ಲಾ ತಿರುನಾರಾಯಣನ

ನಾಮಧಾರಿಗಳಲ್ಲ

ಜನ್ಮ ಸಾರ್ಥಕವಿಲ್ಲದವರೆಲ್ಲಾ ಭಾಗವತರಲ್ಲಾ

ನೇಮನಿತ್ಯಗಳಿಗಿಂತ ನಿರ್ಮಲವಾದ ಮನಸ್ಸು ಮುಖ್ಯ ಎಂಬ ಧೋರಣೆ ದಾಸರದ್ದು. 'ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು' ಎನ್ನುವ ಮೂಲಕ ಕಪಟ ವ್ಯಕ್ತಿಗಳ ಸ್ನೇಹವನ್ನು ನಿರಾಕರಿಸುತ್ತಾರೆ.

ದಾಸರು ನೀತಿ ಹೇಳುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತೀಡಿ ಸಮಾಜವನ್ನು ನಯಗೊಳಿಸಿದರು. ನೀತಿ ಬೋಧನೆಯ ಧಾಟಿಯಲ್ಲಿ ಸಮಾಜದ ಅನಿಷ್ಟಗಳನ್ನು ತೊಡೆದು ಹಾಕಿ ಜನರನ್ನು ಪರಿವರ್ತನೆಗೊಳಿಸಲು ಪ್ರಯತ್ನಿಸಿದರು. ತಮ್ಮ ಚುಚ್ಚು ಮಾತುಗಳ ಮೂಲಕ ಸಮಾಜಕ್ಕೆ ಚಿಕಿತ್ಸೆ ನೀಡಿದರು. ಅವರ ಕಟುವಾದ ಮಾತುಗಳ ಹಿಂದೆ ವೈಚಾರಿಕ ಮನೋಭಾವ, ಸಾಮಾಜಿಕ ಪ್ರಜ್ಞೆ, ಮಾನವೀಯ ಅನುಕಂಪ, ಸಾಮಾಜಿಕ ಕಳಕಳಿ, ಮಾನವೀಯ ಮಿಡಿತಗಳಿವೆ.

ದಾಸರು ಸಮಾಜದಲ್ಲಿನ ಕಂದಚಾರ, ಅಸಮಾನತೆ, ಭೇದಭಾವ ಹಾಗೂ ಅಂಕುಡೊಂಕುಗಳ ಬಗ್ಗೆ ಕಾವ್ಯಗಳನ್ನು ರಚಿಸುವ ಮೂಲಕ ಸಮಾಜವನ್ನು ತಿದ್ದಿ ತೀಡಿದ್ದಾರೆ. ಸಮಾಜದಲ್ಲಿನ ಅಂಧಕಾರವನ್ನು ಹೋಗಲಾಡಿಸಲು ಪ್ರತಿಯೊಂದು ಮನೆಯನ್ನು ಅನುಭವ ಮಂಟಪವನ್ನಾಗಿ ಮಾಡಿಕೊಂಡು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಅರಿವು ಮೂಡಿಸಿದ್ದಾರೆ. ದಾಸರ ಆದರ್ಶ, ತತ್ವಜ್ಞಾನ ಕೇವಲ ಪುಸ್ತಕಕ್ಕೆ ಸೀಮಿತವಾಗದೇ, ನಮ್ಮ ಬದುಕಿಗೆ ಅಳವಡಿಸಿಕೊಳ್ಳುವುದರ ಮೂಲಕ ಉತ್ತಮ ಸಮಾಜವನ್ನು ನಾವಿಂದು ಕಟ್ಟಬೇಕಾಗಿದೆ.

ಆ ಕಾಲದ ಸಾಮಾಜಿಕ ಬದುಕು ರೋಗಿಷ್ಟವಾಗಿದ್ದಂತೆ ಕಾಣುತ್ತದೆ. ಹಾಗಾಗಿಯೇ ಕೀರ್ತನಕಾರರು ಬದುಕಿನ ಆಡಂಬರ ಸೋಗಿನ ಡಾಂಭಿಕ ಬೂಟಾಟಿಕೆಯನ್ನು ನಿರಂತರ ತಮ್ಮ ಕೀರ್ತನೆಗಳಲ್ಲಿ ದರ್ಶಿಸುವ ಪ್ರಯತ್ನ ಮಾಡುತ್ತಾರೆ. ಪುರಂದರದಾಸರ ಈ ಕೀರ್ತನೆ ಅದಕ್ಕೊಂದು ಉತ್ತಮ ಉದಾಹರಣೆ : ಬೇವು ಬೆಲ್ಲದೊಳಿಡಲೇನು ಫಲ?

ಹಾವಿಗೆ ಹಾಲೆರೆದೇನು ಫಲ?

ಕುಟಿಲವ ಬಿಡದಿಹ ಮನುಜರು ಮಂತ್ರವ

ಪಠನೆಯ ಮಾಡಿದರೇನು ಫಲ?

ಮಾತಾಪಿತರನು ಬಳಲಿಸಿದಾತನು

ಯಾತ್ರೆಯ ಮಾಡಿದರೇನು ಫಲ?

ಪತಿಗಳ ನಿಂದಿಪ ಸತಿಯರು ಬಹುವಿಧ

ವ್ರತಗಳ ಮಾಡಿದರೇನು ಫಲ?

ಹೀನ ಗುಣಂಗಳ ಹಿಂಗದೆ ಗಂಗೆಯ

ಸ್ನಾನವ ಮಾಡಿದರೇನು ಫಲ?

ಬಹು ಸಾರವತ್ತಾದ ಈ ಕೀರ್ತನೆಯಲ್ಲಿ ಪುರಂದರದಾಸರು ಮನುಷ್ಯ ಬದುಕಿನಲ್ಲಿ ಮಾಡಬೇಕಾದ ಸತ್ಕರ್ಮಗಳನ್ನು ನೆನಪಿಸುತ್ತಾರೆ. ಹಾಗಿಲ್ಲದಿರೇ ಅಂತಹ ಹೀನಚರಿತನ ಡಾಂಭಿಕತೆಯನ್ನು ತೋರಿಕೆಯ ಆಚರಣೆಯನ್ನು ವಿಡಂಬಿಸುತ್ತಾರೆ. ತತ್ವರಹಿತವಾದ ಆಚರಣೆಗಳು ಎಂದಗೂ ನಿಷ್ಪ್ರಯೋಜಕ. ಮೋಸ ಮಾಡುವ, ಸುಳ್ಳಾಡುವ ಜನರನ್ನು ದಾಸರು ಕಟುವಾಗಿ ಟೀಕಿಸುತ್ತಾರೆ. ತತ್ವ ಮತ್ತು ಆಚರಣೆಗಳು ಯಾವ ಕಾಲಕ್ಕೂ ಅಬೇಧವಾಗಿರತಕ್ಕದ್ದು. ಕಪಟ ಕುತಂತ್ರ, ಹಿರಿಯರಲ್ಲಿ ಅಗೌರವ ಇತ್ಯಾದಿ ಗುಣಗಳ ಬೆಳೆಸಿಕೊಂಡು ಲೋಕದ ಕಣ್ಣಿಗೆ ಜಪತಪಗಳ ಉಪವಾಸಗಳ ಮಾಡುತ್ತಾ ಸೋಗಿನ ಮುಖವಾಡದ ಜನರನ್ನು ಹೀಗಳೆಯುತ್ತಾರೆ. ಬೇವನ್ನು ಬೆಲ್ಲದಲ್ಲಿಟ್ಟರೂ ತನ್ನ ಕಹಿತ್ವವನ್ನು ನೀಗಿಸಿಕೊಳ್ಳಲಾಗದು. ಹಾಗೆ ದುಷ್ಟರು ಶಿಷ್ಟರ ಸಂಗದಲ್ಲಿದ್ದರೂ ತಮ್ಮ ಕುಟಿಲತೆಯನ್ನು ಬಿಡಲಾರರು. ಇದಕ್ಕೆ ಪೂರಕವಾಗಿ ಕನಕದಾಸರು ಒಂದೆಡೆ ಹೇಳುತ್ತಾರೆ 'ಮೋಸದಿ ಜೀವಿಯ ಘಾಸಿಯಗೈದುದು, ಕಾಶಿಗೆ ಹೋದರೆ ಹೋದೀತೆ' ಎಂದು.

ಸಾಮಾಜಿಕ ಬದುಕು ಸಂಕೀರ್ಣತೆಗಳ ಹಂದರ. ಅಲ್ಲಿಯ ಏಳು ಬೀಳುಗಳು ಸಾಮಾನ್ಯನಾದವನನ್ನು ಕಂಗೆಡಿಸುವುದು. ಅದಕ್ಕೆ ಮನುಷ್ಯನ ತಾಳ್ಮೆಯೊಂದೆ ಅಸ್ತ್ರ. ಆತಂಕಬೇಡ, ಎಲ್ಲರನ್ನೂ ಕಾಯುವ ಹರಿ ಇದ್ದಾಗ ಸಲ್ಲದ ದುರಿತಗಳ ನೆನೆದು ಕಂಗೆಡಬೇಡಿರೆಂದು ಹೇಳುತ್ತಾರೆ ದಾಸರು.

ತಲ್ಲಣಿಸದಿರು ಕಂಡ್ಯಾ ತಾಳು ಮನವೇ

ಎಲ್ಲರನೂ ಸಲಹುವನು ಇದಕೆ ಸಂಶಯವಿಲ್ಲ

ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ

ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ

ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು

ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ

ಬದುಕಿನ ಕಷ್ಟಕೋಟಲೆಗಳಿಗೆ ಮಾನವ ಬೆದರಿ ನಿಲ್ಲಬಾರದು. ಎಲ್ಲಕ್ಕೂ ಒಂದು ಪರಿಹಾರವನ್ನು ಆ ಭಗವಂತ ಕೊಟ್ಟೆ ಕೊಡುವನೆಂಬ ಆಶಾವಾದ ಇಲ್ಲಿ ವಿದಿತವಾಗಿದೆ.

DOI: 10.59176
http://www.kristujayantijournal.com/index.php/KJKSP

ದ್ವೈತ ಸಿದ್ಧಾಂತದ ಪ್ರತಿಪಾದಕರಾದ ಕೀರ್ತನಕಾರರು ದೇವನ ಲೀಲೆಗಳನ್ನು ವೈಭವೀಕರಿಸುತ್ತಾ ತತ್ವಜ್ಞಾನ, ವೈರಾಗ್ಯ, ಸಾಮಾಜಿಕ ವಿಡಂಬನೆ, ರಾಜಕೀಯ ವಿಡಂಬನೆ, ವೈಯಕ್ತಿಕ ನೋವು, ನಿರಾಶೆಗಳು, ಬದುಕಿನ ನಶ್ವರತೆ, ತಮ್ಮ ಸ್ವಾನುಭವಗಳನ್ನು ಮನೋಜ್ಞವಾಗಿ ಹಾಡಿದ್ದಾರೆ. ಬದುಕಿನ ಪ್ರಸ್ತುತತೆಗೆ ಅಗತ್ಯವಾದ ಮೂಲ ಧಾತುಗಳೇನು? ಎಂಬ ಜಿಜ್ಞಾಸೆ ಬಹಶಃ ವಚನಕಾರರಂತೆ ದಾಸರಲ್ಲಿಯೂ ಕಾಡಿದ ಸಾಮಾನ್ಯ ಸಂಗತಿಯಾಗಿರಬೇಕು. ಜೀವನ ಹಲವು ಮಗಲುಗಳಲ್ಲಿ ಪದೇ ಪದೇ ಕಾಡುವ ಅತೃಪ್ತಿಗೆ ಕಾರಣ ನಾವು ಇದ್ದುದ್ದರಲ್ಲಿ ಸುಖ ಕಾಣದೇ ಇರುವುದು. ಅಂತಹ ಸಂದರ್ಭಗಳಲ್ಲಿ ಐಹಿಕ ಅನುಭೋಗಗಳು ಹೆಚ್ಚಾದಷ್ಟು ಇಂತಹ ಅತೀರೇಕದ ಅಸಮಾಧಾನ ಅತೃಪ್ತಿಗಳು ತಾಂಡವವಾಡುತ್ತಾ, ಸಾಮಾಜಿಕ ಸಹ್ಯ ಮನೋಭಾವ ಕಡಿಮೆಯಾಗುತ್ತದೆ. ದುಷ್ಟತೆ, ಅನ್ಯಾಯ, ಅನಾಚಾರಗಳು ಭುಗೀಲೇಳುತ್ತವೆ. ಹಾಗಾದರೆ ಸಾಮಾಜಿಕ ಶಿಸ್ತು ಮೂಡಿಸುವ ಪರಿಯನ್ನು ದಾಸರು ತಮ್ಮ ಕೀರ್ತನೆಗಳಲ್ಲಿ ಕಟ್ಟಿಕೊಡುತ್ತಾರೆ. ಘನ ತಮಂಧದ ಆಳದಲ್ಲಿ ಮುಳುಗೇಳುವ ಜನಸಾಮಾನ್ಯರ ಮನಸ್ಸನ್ನು ಸ್ಥಿರ ಚಿತ್ತದತ್ತ ನೆಲೆಸುವಂತೆ ಮಾಡುವ ಕೀರ್ತನೆಗಳನ್ನು ರಚಿಸಿ, ಹಾಡುಗಬ್ಬವಾಗಿ ರಾಗವಾಗಿ ಜನರ ಮನಕ್ಕೀಳಿಯುವಂತೆ ಕಾವ್ಯ ರಚನೆ ಮಾಡಿದವರು ಕೀರ್ತನೆಕಾರರು.

ನೂರಾರು ಕೀರ್ತನೆಗಳು, ಸುಳಾದಿ ಹಾಗೂ ಹರಿಕಥಾಮೃತಸಾರದಂತಹ ಮೇರು ಕೃತಿಯನ್ನು ರಚಿಸಿದ ಜಗನ್ನಾಥದಾಸರ ಕೃತಿಗಳಲ್ಲಿನ ಸಾಮಾಜಿಕ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಜಗನ್ನಾಥದಾಸರ ಕೃತಿಗಳ ಮುಖ್ಯ ಉದ್ದೇಶ ಭಕ್ತಿ ಪ್ರತಿಪಾದನೆಯಾಗಿದ್ದರು, ಅದರೊಂದಿಗೆ ಅವರು ಮಾತಾಪಿತರನ್ನು ಸಲುಹಬೇಕು, ಎಲ್ಲರೊಂದಿಗೆ ಪ್ರೀತಿ ಗೌರವದಿಂದ ಬಾಳ್ವೆ ನಡೆಸಬೇಕು. ಕಷ್ಟ ಸಹಿಷ್ಣುತೆಯನ್ನು ಬೆಳೆಸಿಕೊಳ್ಳಬೇಕು, ಸರ್ವರಲ್ಲಿ ಭಗವಂತನನ್ನು ಕಾಣಬೇಕು ಎಂಬ ಅನೇಕ ಸಾಮಾಜಿಕ ಚಿಂತನೆ ಹೊಂದಿದ ಜೀವನ ಮೌಲ್ಯಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ವಚನ ಭಂಗ, ಅಪವಾದ, ಅಪನಂಬಿಕೆ, ವಿಪ್ರಲಾಪಗಳೇ ವೃದ್ಧಿಯಾಗುತ್ತಿರುವ ಒಂದು ಕಾಲಘಟ್ಟದಲ್ಲಿ ಸಮಾಜದ ಹಲವು ಅನ್ಯಾಯ ಅನೀತಿಗಳಿಗೆ ದಾಸ ಸಾಹಿತ್ಯ ತೆರೆದ ಕಣ್ಣಿನಿಂದ ಮುಲಾಮು ಹಚ್ಚುವ ಪ್ರಯತ್ನವನ್ನು ಮಾಡಿದೆ.

ದಾಸರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅನನ್ಯ. ಅಂದಿನ ಕಾಲದ ಸಾಮಾಜಿಕ ಜೀವನದಲ್ಲಿ ದೈವತ್ವದ ಕಲ್ಪನೆಗಳು, ಬಹು ಪ್ರಖರವಾಗಿದ್ದವು ಮತ್ತು ಸಾಮಾನ್ಯರನ್ನು ಮೋಕ್ಷದ ನೆಪದಲ್ಲಿ ಆಧ್ಯಾತ್ಮದ ಸನ್ನಿಧಾನಕ್ಕೆ ಕೊಂಡೊಯ್ಯುವ ಸಾಧನವಾಗಿದ್ದವು. ಹಾಗಾಗಿ ದಾಸರು ಕೀರ್ತನೆಗಳಲ್ಲಿ ಆರ್ತತೆಯನ್ನು, ಆಧ್ಯಾತ್ಮವನ್ನು ಘನೀಕರಿಸಿ ಕಾವ್ಯ ರಚಿಸಿದರು. ಭಕ್ತಿಯ ಹೊನಲನ್ನು ಹರಿಸಿದರು. ಮಾನವ ಜನುಮದ ಸಾರ್ಥಕತೆಯನ್ನು, ಸಂಸ್ಕೃತಿಯ ಪರಂಪರೆಯ ಮಹತ್ವವನ್ನು ಮನಗಾಣಿಸಿದರು. ಅವರ ಕೀರ್ತನೆಗಳಲ್ಲಿ ಜೀವನದ ಮೌಲ್ಯಗಳ ಸರಕೆ ಇದೆ. 'ಕಲ್ಲಾಗಿ ಇರಬೇಕು ಕಠಿಣ ಭವತೊರೆಯೊಳಗೆ', 'ಜಾಲಿಯ ಮರದಂತೆ ದುರ್ಜನರು ಜಗದೊಳಗೆ', 'ಈಸಬೇಕು ಇದ್ದು ಜೈಸಬೇಕು' ಇತ್ಯಾದಿ ನುಡಿಗಳು ಬದುಕಿನ ತಲ್ಲಣಗಳಿಗೆ ಬಸವಳಿದು ನಿಂತ ಮನಸ್ಸಿಗೆ ಭರವಸೆಯನ್ನು, ಧೈರ್ಯವನ್ನು ತುಂಬುತ್ತವೆ. ಮಾನವ ಸಮುದಾಯದ ಸದಾಚಾರ, ಸತ್ವಕತೆಯನ್ನು ತ್ರಿಕರಣ ಶುದ್ಧತೆಯ ಮಹತ್ವವನ್ನು ಸಾರ್ವತ್ರಿಕ ನೆಲೆಯಲ್ಲಿ ಅರ್ಥಗರ್ಭೀತವಾಗಿ ಹೇಳಿದವರು ದಾಸರು.

ದಾಸ ಪರಂಪರೆಯ ಕೀರ್ತನಕಾರರು ರಚಿಸಿದ ಕೀರ್ತನೆಗಳು ಜನಮನ ತಲುಪಿ ಸಾಮಾಜಿಕ ಪರಿವರ್ತನೆಗೆ ದಾರಿ ದೀಪವಾದವು. ದಾಸ ಸಾಹಿತ್ಯ ಹಾಗೂ ಕೀರ್ತನೆಗಳನ್ನು ಮನನ ಮಾಡಿಕೊಂಡು ಅವರ ಆದರ್ಶ ಹಾಗೂ ಚಿಂತನೆಗಳನ್ನು ಯುವಪೀಳಿಗೆಗೆ ತಲುಪಿಸಬೇಕು. ದಾಸರು ಕಟ್ಟಿಕೊಟ್ಟ ನಿಲುವುಗಳನ್ನು ಧಾರ್ಮಿಕ, ಸಾಮಾಜಿಕ, ಸಾಹಿತ್ಯ ಮತ್ತು ಭಕ್ತಿಯ ನೆಲೆಗಟ್ಟಿನಲ್ಲಿ ನೋಡಬೇಕು. ಶರಣರು, ದಾಸರು, ಅಂಬೇಡ್ಕರರು ಹೀಗೆ ಹಲವಾರು ಮಹನೀಯರನ್ನ ಜಾತಿ ಎಂಬ ಸಂಕೋಲೆಯಲ್ಲಿ ಕಟ್ಟಿ ಹಾಕಿದ್ದೇವೆ. ಆದರೆ ಅವರು ನಾವೆಲ್ಲಾ ಒಂದೇ ಎಂಬ ಸಂದೇಶವನ್ನು ಇಡೀ ಜಗತ್ತಿಗೆ ಸಾರಿದರು. ದಾಸರ ಶ್ರೀಮಂತ ಸಾಹಿತ್ಯ, ಧಾರ್ಮಿಕ ಚಿಂತನೆ, ಭಕ್ತಿಯ ರಸಾಮೃತ ಮತ್ತು ಸಮಾನತೆ ತತ್ವವನ್ನು ಬೋಧಿಸಿರುವುದು ಅಂದಿಗೆ ಮಾತ್ರ ಸೀಮಿತವಲ್ಲ, ಅದು ಸಾರ್ವಕಾಲಿಕವಾಗಿದೆ. ಹೀಗಾಗಿ ಅವುಗಳನ್ನು ನಮ್ಮ ಜೀವನದ ಆದರ್ಶಗಳಾಗಿ ಸ್ವೀಕರಿಸಬೇಕು. ಇಂದಿನ ಕಲುಷಿತ ಸಾಮಾಜಿಕ ವಾತಾವರಣದಲ್ಲಿ ಅದ್ಭುತ ಅರ್ಥವನ್ನೊಳಗೊಂಡ ದಾಸರ ಕೀರ್ತನೆಗಳ ಮರ್ಮವನ್ನು ಅರಿತುಕೊಳ್ಳುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು :**

1. ಸಾಮಾನ್ಯನಿಗೆ ಸಾಹಿತ್ಯಚರಿತ್ರೆ
   ಕೀರ್ತನಕಾರರು – ಡಾ. ಎಚ್.ಎಸ್. ವೆಂಕಟೇಶಮೂರ್ತಿ ಸಂ–08 (1975), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 560056
2. ವಚನ– ಕೀರ್ತನೆಗಳ ಸಂಗ್ರಹ – (ಸಂ). ಡಾ. ಮೀನಾಕ್ಷಿ ಜಂಗಮನಿ (2009), ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ– 585106
3. ನಡುಗನ್ನಡ ಸಾಹಿತ್ಯ ಸಂಗ್ರಹ – (ಸಂ). ಡಾ. ಜಯಶ್ರೀ ದಂಡೆ (2009), ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ– 585106
4. ನಡುಗನ್ನಡ ಸಾಹಿತ್ಯ ಪರಿವೇಷ – ಡಾ. ಗುರುಪಾದ ಮರಿಗುದ್ದಿ (2009), ಪ್ರತಿಧ್ವನಿ ಪ್ರಕಾಶನ, ನಂ.100, 2ನೇ ಮೇನ್‌ರೋಡ್ ಶಿವಾ ನಗರ, ರಾಜಾಜಿ ನಗರ, ಬೆಂಗಳೂರು – 50010
5. ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು (ಕನಕ ಸಾಹಿತ್ಯ ದರ್ಶನ ಸಂ.4) – ಸುಧಾಕರ (2012) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು.